ಕೊರಿಯನ್ ಕವಿಯೂ ಹೀಗೆ ಅತಿರೇಟಿನ ಸಿಗರೇಟಿನ ಅತಿರೇಕದ ಕವನ ಬರೆದಿದ್ದಾನಂತೆ.

ಪ್ರಾಸಕ್ಕಾಗಿ ಹಗೆ ಹಾಗೂ ಹೊಗೆ ಒಟ್ಟಿಗೆ ಬರುವ ಶಬ್ದಗಳು. ನಾನು ನೋಡಿದ ಮೊದಲನೇ ತುಳು ಚಲನಚಿತ್ರ 'ಪಗೆತ ಪುಗೆ' (ಹಗೆಯ ಹೊಗೆ). ಅದರಲ್ಲಿ ಹೊಗೆ ಹಗೆಗಳೆಲ್ಲ ಯಾವ ಮಟ್ಟದಲ್ಲಿ ಇತ್ತೋ ನೆನಪಿಲ್ಲ. ಆದರೆ, ಇಂಜೂರಿಯಸ್ ಟು ಹೆಲ್ತ್ ಎನ್ನುವ ಅಡಿಟಿಪ್ಪಣಿಯಂತೂ ಇರಲಿಲ್ಲ. ಆಗ ಸಿನಿಮಾಗಳಲ್ಲಿ ಖಳನಾಯಕರು ಸ್ಟೈಲಿಶ್ ಆಗಿ ಸೇದುತ್ತಿದ್ದ ಬೀಡಿ ಸಿಗಾರ್‌ಗಳನ್ನು ನೋಡಿ, ಈ ಹೊಗೆ ಬತ್ತಿಗಳು ಪುರುಷರಿಂದ ಪುರುಷರಿಗಾಗಿಯೇ ಇರುವಂಥವುಗಳು ಅಂದುಕೊಂಡಿದ್ದೆ. 'ಧಂ ಮಾರೋ ಧಂ...' ಎಂದು ಹಾಡುತ್ತಾ ಹೆಂಗಸರೂ ಭಂಗಿಯನ್ನು ಪುಂಗಿ ಊದುವಂತೆ ಸೇದಿ ತೂರಾಡುವ ಭಂಗಿಗಳನ್ನು ನೋಡಿದ ಮೇಲೆ ಪುರುಷರಲ್ಲದವರೂ ಪ್ರಯತ್ನಿಸಬಹುದು ಅನ್ನಿಸಿತ್ತು. (ಲೇಡಿ ಮೌಂಟ್ ಬ್ಯಾಟನ್ ಸಿಗರೇಟು ಸೇದುವ ಚಿತ್ರಗಳನ್ನು ಮತ್ಸರದಿಂದ ಗಂಡಸರೇ ಯಾಕೆ ವೈರಲ್ ಮಾಡಿರಬಾರದು?) ಆದರೂ ನಾವು ಬಾಲ್ಯದಲ್ಲಿ ಕಮ್ಯೂನಿಸ್ಟ್ ಗಿಡದ ಒಣಗಿದ ಕಡ್ಡಿಯನ್ನು ಬೆಂಕಿಗೆ ಹಿಡಿದು ಬೀಡಿಯಂತೆ ಸೇದಿದವರೇ. ಅದು ಕೊಳವೆಯಂತೆ ಹೊಗೆ ಉಗುಳುವುದನ್ನು ಕಂಡು ಹೆಮ್ಮೆಯಿಂದ ಬೀಗಿದವರೇ. ಆಮೇಲಾಮೇಲೆ ಇದು ಪುರುಷರ ಪೌರುಷ ಪ್ರದರ್ಶನದ ಒಂದು ಚಟ ಅಷ್ಟೇ ಎಂಬ ತೀರ್ಮಾನಕ್ಕೆ ಬಂದದ್ದು ಹೌದಾದರೂ, ನನ್ನ ಗೆಳತಿಯರಲ್ಲಿ ಕೆಲವರು ಸ್ಮೋಕ್ ಮಾಡುವ ಗಂಡಸರು ತಮಗಿಷ್ಟ ಎನ್ನುವುದನ್ನು ಕೇಳಿಸಿಕೊಂಡಾಗ ಸುಮ್ಮನಿರಲೇಬೇಕಾಯಿತು.

ಲೇಡಿ ಮೌಂಟ್ ಬ್ಯಾಟನ್ ಅಂದಾಗ ನೆನಪಾಯಿತು. ನಮ್ಮ ಸ್ಮೋಕೀ ಸಿಟಿಗಳೆಲ್ಲ ಸ್ಮಾರ್ಟ್ ಸಿಟಿಗಳಾಗುತ್ತಿರುವಾಗ, ಸ್ಮಾರ್ಟ್ ಸಿಟಿಯಾದ ಲಂಡನ್ ನಗರಕ್ಕೆ ಮೊದಲು 'ಸ್ಮೋಕ್ ಸಿಟಿ' ಎನ್ನುವ ಹೆಸರಿದ್ದದ್ದು ನಿಮಗೆ ಗೊತ್ತಿತ್ತೇ? ಬರೀ 'ಸ್ಮೋಕ್' ಮಾತ್ರ ಅಲ್ಲ, ಓಲ್ಡ್ ಸ್ಮೋಕ್, ಬಿಗ್ ಸ್ಮೋಕ್ ಮುಂತಾದ ಹೆಸರುಗಳೂ ಅದಕಿದ್ದದ್ದು ಗೊತ್ತಿತ್ತೇ? ಅಲ್ಲಿನ ಜನರು ಅಗ್ಗಿಷ್ಟಿಕೆ ಇತ್ಯಾದಿಗಳಿಗೆ ಹೇರಳವಾಗಿ ಕಲ್ಲಿದ್ದಲು ಬಳಸುತ್ತಿದ್ದುದರಿಂದ ಈ ಹೆಸರು ಬಂದಿತಂತೆ. ಅರೆ!! ಕಲ್ಲಿದ್ದಲಿನಿಂದ ತಾನೇ ನಮ್ಮಲ್ಲಿ ರೈಲಿಗೆ ಉಗಿಬಂಡಿ ಎಂಬ ಹೆಸರು ಬಂದದ್ದು. ಉಗಿಬಂಡಿ ಬಿಡಿಸುವಾಗಲೂ ಅಷ್ಟೇ (ಎಕಾರ್ಡಿಂಗ್ ಟು ತಿಮ್ಮು) ಜೀವಂತಿಕೆ ತರಲು ಕೊಳವೆಯಿಂದ ಹೇರಳ ಕಪ್ಪು ಹೊಗೆಯನ್ನು ಹಿಂದಕ್ಕೆ ಉಗುಳುವಂತೆ ಚಿತ್ರಿಸಬೇಕಂತೆ... ಕೆಲವೊಮ್ಮೆ ಹಾಳೆಯೇ ಹರಿದುಹೋಗುವಷ್ಟು.

ಪಂಪ ತನ್ನ ಹಿರಿಯರ ಯಶಸ್ಸು ಹೋಮ ಧೂಮದಿಂದ ಕರಿದಾಯಿತು ಎಂದು ಹೇಳಿದರೂ ಹೊಗೆಯ ಬಣ್ಣ ಕಪ್ಪು ಖಂಡಿತ ಅಲ್ಲ. ಅದು ಇಂಗ್ಲಿಷಿನ ಗ್ರೇ, ಕನ್ನಡದ ಬೂದು ಎಂದು ದೃಷ್ಟಿ ದೋಷ ಇಲ್ಲದವರೆಲ್ಲ ಹೇಳಬಹುದು. ಅದರೆ, ಅದು ಅಂಟಿಕೊಂಡ ಸ್ಥಳದಲ್ಲಿ ಕುರುಹಾಗಿ ಕಪ್ಪು ಕರಿ ಉಳಿಯುವುದು ಮಾತ್ರ ಹೌದು. ನಮ್ಮ ಓರಗೆಯವರೆಲ್ಲ ಬಚ್ಚಲ ಹಂಡೆಯ ಬಣ್ಣ ಯಾವುದು ಎಂದೇ ತಿಳಿಯದಷ್ಟು ದಪ್ಪಕ್ಕೆ ಅಂಟಿಕೊಂಡ ಕರಿಯನ್ನು ನೋಡ ನೋಡುತ್ತಲೇ ಬಿಸಿಬಿಸಿ ನೀರಿನ ಜೊತೆಗೆ ಹೊಗೆಯ ಪಾನವನ್ನೂ ಸ್ನಾನವನ್ನೂ ಮಾಡುತ್ತಿದ್ದವರು... ಹೀ ಮ್ಯಾನ್, ಸ್ಪೈಡರ್ ಮ್ಯಾನ್‌ಗಳಂತೆ, ಸ್ಮೋಕ್‌ಮ್ಯಾನೋ ಹೊಗೆರಾಯಗಳೋ ಆಗಿ ಮೈಯಲ್ಲೆಲ್ಲ ಆವಿಯ ಹೊಗೆ ತುಂಬಿಕೊಂಡು ಹೊರ ಬರುತ್ತಿದ್ದವರು... ಗಲಾಟೆ ದೊಂಬಿಗಳ ಸಮಯದಲ್ಲಿ ಕಪ್ಪು ಟಯರ್ ಹೊಗೆಯನ್ನೂ ಕಂಡವರು... ದ್ವೇಷದಿಂದ ಒಣಹುಲ್ಲಿನ ಬಣವೆಗೆ ಬೆಂಕಿ ಇಟ್ಟಾಗ ಆ ಬೆಂಕಿಗೂ ಹೊಗೆಗೂ ಸಾಕ್ಷಿಯಾದವರು... ಬೀಡಿ ಹೊತ್ತಿಸಿಕೊಂಡು ಬಾರೋ ಎಂದು ಜಗಲಿಯ ಪಟ್ಟಾಂಗದವರು ಹೇಳಿದರೆ, ಒಲೆಯಿಂದ ಉರಿಯುತ್ತಾ ಹೊರಟ ಬೀಡಿ ಜಗಲಿ ಸೇರುವ ಮುನ್ನ ಮಧ್ಯದಲ್ಲಿ ಒಂದೆರಡು ದಂ ಎಳಕೆಯಾಗುವುದನ್ನೂ ನೋಡಿದವರು... ಶಾಲೆಯ ದಾರಿಯಲ್ಲಿ ಹೊಗೆಯುಗುಳುತ್ತಾ ಕುಳಿತಿರುತ್ತಿದ್ದ ತುಂಡುಬೀಡಿ ಪುಂಡರಿಗೆ ಹೆದರದೆ ಆ ಹೊಗೆಯನ್ನೂ ಯಶಸ್ವಿಯಾಗಿ ದಾಟಿ ಬಂದವರು...